# ಸ್ವಾಮಿ ವಿವೇಕಾನಂದರು ಕಂಡಂತೆ ತರುಣ ಜನಾಂಗದ ಕರ್ತವ್ಯ

ಸ್ವಾಮಿ ಅಘಹರಾನಂದ

ಯುವಜನತೆ ಇಂದು ಕಂಡುಕೊಳ್ಳಬೇಕಾದ ಧ್ಯೇಯ-ಆದರ್ಶಗಳು ನಮ್ಮ ದೇಶದ ಭವಿಷ್ಯವನ್ನು ನಿರ್ಧರಿಸಬಲ್ಲವು. ಚಿಂತನಪ್ರದವೂ ಅತ್ಯಂತ ಉಪಯುಕ್ತವೂ ಆದ ಈ ವಿಷಯದ ಬಗ್ಗೆ ಇಲ್ಲಿ ಬರೆದಿರುವ ಲೇಖಕರು ಉತ್ತಮ ವಾಗ್ಮಿಗಳು ಹಾಗೂ ಬರಹಗಾರರು. ಪ್ರಸ್ತುತ ಅವರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



### ಪೀಠಿಕೆ

ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ ೧೨ನ್ನು ಭಾರತ ಸರ್ಕಾರವು **‘ರಾಷ್ಟ್ರೀಯ ಯುವ ದಿನಾಚರಣೆ’** ಎಂದು ಆಚರಿಸುತ್ತಿದೆ. ಸರ್ವಸಂಗ ಪರಿತ್ಯಾಗಿಯಾದ, ಪ್ರಾಪಂಚಿಕ ಆಸೆಗಳನ್ನು ಪರಿತ್ಯಾಗ ಮಾಡಿದ ಓರ್ವ ಸಂನ್ಯಾಸಿಯ ಜನ್ಮದಿನವನ್ನು ಶಕ್ತಿ, ಆನಂದ ಹಾಗೂ ಉತ್ಸಾಹಗಳ ದ್ಯೋತಕವಾದ, ಯುವಸಮೂಹದ ದಿನಾಚರಣೆಯಾಗಿ ಆಚರಿಸಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಏಳಬಹುದು. ಇದಕ್ಕೆ ಉತ್ತರ ನಮಗೆ ಸ್ವಾಮೀಜಿಯವರ (ಸ್ವಾಮಿ ವಿವೇಕಾನಂದರ) ಜೀವನ ಹಾಗೂ ಸಂದೇಶಗಳಲ್ಲಿ ದೊರಕುತ್ತದೆ.

ಸ್ವಾಮೀಜಿ ಅಮೆರಿಕಾಗೆ ಹೋದದ್ದು ೧೮೯೩ರಲ್ಲಿ. ಅವರು ದೇಹತ್ಯಾಗ ಮಾಡಿದ್ದು ೧೯೦೨ರಲ್ಲಿ. ಎಂದರೆ ಅವರ ಪ್ರಮುಖ ಕೆಲಸಗಳೆಲ್ಲ ಜರುಗಿದ್ದು ಈ ೯ ವರ್ಷದ ಅವಧಿಯಲ್ಲಿ. ಆದರೆ ಈ ಅತ್ಯಲ್ಪ ಅವಧಿಯಲ್ಲಿ ಅವರು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಭಾರತದ ಬಗ್ಗೆ, ಅದರಲ್ಲೂ ಮುಖ್ಯವಾಗಿ ಹಿಂದೂಧರ್ಮದ ಬಗ್ಗೆ ಗೌರವ ಉಂಟುಮಾಡಿದರು. ವೇದಾಂತ ಸಂದೇಶದ ಪ್ರಚಾರ ಮಾಡಿ, ಸರ್ವಧರ್ಮ ಸಮನ್ವಯವೆಂಬ ಸಂದೇಶದ ಬೀಜ ಬಿತ್ತಿದರು. ಭಾರತೀಯರಿಗೆ ಆತ್ಮಗೌರವ ದೊರಕುವಂತೆ ಮಾಡಿ, ಸ್ವತಂತ್ರ ಭಾರತಕ್ಕೆ ನಾಂದಿ ಹಾಡಿದರು. ಸ್ವತಃ ಸ್ವಾಮೀಜಿ ಹೇಳುವಂತೆ, ಅವರ ಸಂದೇಶ ಇನ್ನೂ ೧೫೦೦ ವರ್ಷಗಳ ಕಾಲ ಮನುಕುಲಕ್ಕೆ ದಾರದೀಪವಾಗಲಿದೆ. ಇಂತಹ ಅತಿಮಾನುಷ ಕಾರ್ಯವೆಸಗಿದ ಸ್ವಾಮೀಜಿ ಯುವಜನತೆಗೆ ಆದರ್ಶವಾದರೆ ಅದರಲ್ಲಿ ಅಚ್ಚರಿಯೇನಿದೆ?

ಸ್ವಾಮೀಜಿ ಹೇಳುತ್ತಾರೆ, ‘‘ನಾನು ಯುವಕರಿಗಾಗಿ ನನ್ನ ಇಡೀ ಜೀವನವನ್ನೇ ತ್ಯಾಗ ಮಾಡಲು ಸಿದ್ಧ. ಏಕೆಂದರೆ ಅವರಿಗೆ ನನ್ನ ಆದೇಶಗಳನ್ನು ಕಾರ್ಯಗತಗೊಳಿಸುವ ಮನಸ್ಸೂ ಇದೆ, ಸಾಮರ್ಥ್ಯವೂ ಇದೆ. ನನ್ನ ಶ್ರದ್ಧೆ ಇರುವುದು ಯುವ ಜನಾಂಗದಲ್ಲಿ , ಆಧುನಿಕ ಜನಾಂಗದಲ್ಲಿ. ಅವರುಗಳಿಂದ ನನ್ನ ಕೆಲಸಗಾರರು ಬರುತ್ತಾರೆ ಹಾಗೂ ಪ್ರಸ್ತುತ ಸಮಾಜದ ಎಲ್ಲ ಸಮಸ್ಯೆಗಳನ್ನು ಸಿಂಹಪರಾಕ್ರಮದಿಂದ ಪರಿಹರಿಸುತ್ತಾರೆ’’ ಎಂದು.

ಸ್ವಾಮೀಜಿ ಯುವ ಜನಾಂಗದಿಂದ ಬಯಸಿದ ವ್ಯಕ್ತಿತ್ವವೆಂತಹುದು ಹಾಗೂ ಕಾರ್ಯಪ್ರಣಾಳಿ ಯಾವ ರೀತಿಯದು ಎಂದು ಅರಿಯಲು ಪ್ರಯತ್ನಿಸೋಣ.

### ೧)ವಿಶಾಲ ದೃಷ್ಟಿಕೋನ

ಋಗ್ವೇದದಲ್ಲಿ ಒಂದು ಮಾತಿದೆ:

**‘ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ’** – ಎಂದರೆ ‘ವಿಶ್ವದ ಎಲ್ಲ ದಿಕ್ಕಿನಿಂದ ಉನ್ನತ ವಿಚಾರಗಳು ಹರಿದು ಬರುವಂತಾಗಲಿ’ ಎಂದು. ಹರಿಯುವ ನೀರು ಪರಿಶುದ್ಧವಾಗಿರುತ್ತದೆ. ನಿಂತ ನೀರಿನಲ್ಲಿ ಪಾಚಿ ಬೆಳೆಯುತ್ತದೆ. ನಾವು ಎಂದಿಗೂ ಕೂಡ ನಿಂತ ನೀರಾಗಬಾರದು. ನಮ್ಮ ದೃಷ್ಟಿ ಅಭಿವೃದ್ಧಿಯತ್ತ, ವಿಕಾಸದತ್ತ ಇರಬೇಕು. ಇದನ್ನೇ ಸ್ವಾಮೀಜಿ ತರುಣ ಜನಾಂಗದಿಂದ ವಿಶೇಷವಾಗಿ ಬಯಸಿದ್ದು.

ಅಮೆರಿಕಾಗೆ ಹೋಗುವಾಗ ಸ್ವಾಮೀಜಿ ಚೀನಾ-ಜಪಾನುಗಳಿಗೆ ಭೇಟಿ ನೀಡುತ್ತಾರೆ. ಅಲ್ಲಿನ ಅಭಿವೃದ್ಧಿಯನ್ನು ಕಂಡು, ಹಾಗೂ ಭಾರತದ ದುಸ್ಥಿತಿಗೆ ಬಹುಮಟ್ಟಿಗೆ ಕಾರಣವಾದ ಭಾರತೀಯರ ಆಲಸ್ಯ ಹಾಗೂ ಕೂಪಮಂಡೂಕತನದ ಬುದ್ಧಿಯನ್ನು ತೀಕ್ಷ್ಣವಾಗಿ ಖಂಡಿಸಿ, ಅವರು ಬರೆಯುತ್ತಾರೆ:

‘‘ನಮ್ಮ ದೇಶದ ಯುವಕರು ಪ್ರತಿ ವರ್ಷವೂ ಹೆಚ್ಚೆಚ್ಚು ಸಂಖ್ಯೆಯಲ್ಲಿ ಚೀನಾ ಮತ್ತು ಜಪಾನುಗಳಿಗೆ ಭೇಟಿ ನೀಡುವಂತಾಗಬೇಕು. ಬನ್ನಿ ಇಲ್ಲಿಗೆ, ಸಮುದ್ರ ದಾಟಿದರೆ ನಿಮ್ಮ ಜಾತಿ ಕೆಟ್ಟುಹೋಗುತ್ತದೆ. ಅಲ್ಲವೆ? ಬುದ್ಧಿಗೆಟ್ಟ ಅರಳು ಮರುಳು ಜನಾಂಗ! ಶತಶತಮಾನಗಳಿಂದಲೂ ಮೂಢನಂಬಿಕೆ, ಕಂದಾಚಾರಗಳ ಕಂತೆಯನ್ನು ತಲೆಯ ಮೇಲೆ ಹೊತ್ತು ಕುಳಿತಿರುವವರು! ಈ ಆಹಾರವನ್ನು ಮುಟ್ಟಬಹುದೆ, ಆ ಆಹಾರವನ್ನು

ಮುಟ್ಟಬಾರದೆ – ಎಂಬ ಬಹು ದೊಡ್ಡ ವಿಮರ್ಶೆಯಲ್ಲಿ ನೂರಾರು ವರ್ಷಗಳಿಂದ ಮುಳುಗಿದ್ದೀರಲ್ಲ – ಎಂಥ ಮನುಷ್ಯರು ನೀವೆಲ್ಲ!''

ಸ್ವಾಮೀಜಿ ಕಾಲೇಜು ವಿದ್ಯಾರ್ಥಿಯಾಗಿದ್ದ (ಆಗ ಅವರ ಹೆಸರು ನರೇಂದ್ರ) ಸನ್ನಿವೇಶವನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ನರೇಂದ್ರ ಜನತೆಯನ್ನು ಸತ್ವರಹಿತ ಕಂದಾಚಾರಗಳಿಂದ ಬಿಡಿಸಿ ಪ್ರಗತಿಪರ ಮಾರ್ಗದಲ್ಲಿ ಮುನ್ನಡೆಸುವ ಯಾವುದೇ ಸಂಸ್ಥೆಯಾಗಲಿ, ಚಳುವಳಿಯಾಗಲಿ ಅದಕ್ಕೆ ಸೇರಿಕೊಂಡು ಆ ಪ್ರಯತ್ನದಲ್ಲಿ ನೆರವಾಗಲು ಪ್ರಯತ್ನಿಸುತ್ತಿದ್ದ. ರಾಷ್ಟ್ರದ ಪರಿಸ್ಥಿತಿ ಹೇಗಿದ್ದರೂ ತನಗೇನು ಎಂಬ ನಿರಾಸಕ್ತ ಸಪ್ಪೆ ಮನೋಭಾವ ಅವನದಾಗಿರಲಿಲ್ಲ. ಇದನ್ನು ಇಂದಿನ ಯುವ ಜನತೆ ವಿಶೇಷವಾಗಿ ಮೈಗೂಡಿಸಿಕೊಳ್ಳಬೇಕು.

ಸ್ವಾಮೀಜಿ ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ: ''ಯಾವ ಮನುಷ್ಯ, ಯಾವ ರಾಷ್ಟ್ರವೇ ಆಗಲಿ, ಇತರರನ್ನು ದ್ವೇಷಿಸಿ ಬದುಕಲು ಸಾಧ್ಯವಿಲ್ಲ. ಯಾವಾಗ ಭಾರತೀಯರು 'ಮ್ಲೇಚ್ಛ' ಎಂಬ ಪದವನ್ನು ಆವಿಷ್ಕರಿಸಿ ಇತರೆ ರಾಷ್ಟ್ರಗಳಿಂದ ದೂರವಿರುವ ಪ್ರವೃತ್ತಿ ಬೆಳೆಸಿಕೊಂಡರೋ ಅಂದಿನಿಂದಲೇ ಭಾರತದ ಅವನತಿ ಪ್ರಾರಂಭವಾಯಿತು'' ಎಂದು.

ನಮ್ಮ ಹಿಂದಿನ ಜನಾಂಗದವರು ತೀರ್ಥಯಾತ್ರೆಗಾಗಿ ಹೋಗುತ್ತಿದ್ದರು. ಕಾಶಿಯ ಶಿವನಿಗೆ ಕನ್ಯಾಕುಮಾರಿಯ ನೀರಿನಿಂದ ಅಭಿಷೇಕ ಮಾಡಬೇಕು ಹಾಗೂ ಗಂಗೆಯಿಂದ ರಾಮೇಶ್ವರ ಶಿವನಿಗೆ ಅಭಿಷೇಕ ಮಾಡಬೇಕೆಂಬ ನಂಬಿಕೆ ಇತ್ತು. ಇದು ಜನರು ಭಾರತಾದ್ಯಂತ ಸಂಚರಿಸಿ ವಿಶಾಲ ಮನೋಭಾವ ಬೆಳೆಸಿಕೊಳ್ಳಲು ಹಾಗೂ ಭಾರತದ ಅಖಂಡತೆ ಉಳಿಯಲು ಕಾರಣವಾಗಿತ್ತು. ಈ ನಿಟ್ಟಿನಲ್ಲಿ ನಮ್ಮ ತರುಣ ಜನಾಂಗ ಆಲೋಚಿಸಬೇಕು. ಹೊಸತನ್ನು ಕಲಿಯುವ, ಜ್ಞಾನ ಸಂಪಾದನೆಗೆ ತವಕಪಡುವ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಇದಕ್ಕಾಗಿ ಕೆಳಕಂಡ ಅಂಶಗಳನ್ನು ಅಳವಡಿಸಿಕೊಳ್ಳಬಹುದು.

ಅ) ರಜಾ ಸಂದರ್ಭದಲ್ಲಿ ಬೇರೆ ಊರು, ನಗರ, ರಾಜ್ಯ ಹಾಗೂ ದೇಶಗಳಿಗೆ ಆಗಾಗ ಭೇಟಿ ನೀಡುವುದು.

ಆ) ಸಾಮಾಜಿಕ ಜಾಲತಾಣಗಳಲ್ಲಿ ಸಮಾಜದ ಗತಿಯ ಕುರಿತಂತೆ ವಿಚಾರ ವಿಮರ್ಶೆಗಳಿಗೆ ತೊಡಗುವುದು.

ಇ) ಸದಾ ಇತರರಿಂದ ಉತ್ತಮವಾದುದನ್ನು ಕಲಿಯುವ ಮನಸ್ಥಿತಿ ಬೆಳೆಸಿಕೊಳ್ಳುವುದು.

### ೨) ನೂತನ ಸಮಾಜ ಸುಧಾರಕರ ನಿರ್ಮಾಣ

ಲಕ್ಷಾಂತರ ಜನರು ತಮ್ಮ ವಿದ್ಯಾಭ್ಯಾಸಕ್ಕಾಗಿ ಪರಿಶ್ರಮಪಟ್ಟಿರುತ್ತಾರೆ. ಸಮಾಜವು ತನ್ನದೇ ಆದ ರೀತಿಯಲ್ಲಿ ನಮ್ಮ ನಿರ್ಮಾಣ ಕಾರ್ಯದಲ್ಲಿ ಕೊಡುಗೆ ನೀಡಿದೆ. ಆದ್ದರಿಂದ ತರುಣ ಜನಾಂಗವು ವಿದ್ಯಾಭ್ಯಾಸ ಪಡೆದ ನಂತರ ಸಮಾಜಪರ ಚಿಂತನೆಯನ್ನು ಬೆಳೆಸಿಕೊಳ್ಳಬೇಕು.

ಸಮಾಜ ಸುಧಾರಕರಾಗಲು ಸ್ವಾಮೀಜಿ ೩ ಮುಖ್ಯ ಅಂಶಗಳನ್ನು ಒತ್ತಿ ಹೇಳುತ್ತಾರೆ:

**ಅ) ಭಾವಿಸಬಲ್ಲ ಹೃದಯ:** ಸುತ್ತಮುತ್ತಲಿನ ವ್ಯಕ್ತಿ ಹಾಗೂ ಸಮಾಜ ಹಲವಾರು ತೊಂದರೆಗಳಿಂದ, ಪಿಡುಗುಗಳಿಂದ ಪರಿತಪಿಸುತ್ತಿರುತ್ತದೆ. ಅದರ ಕುರಿತಾಗಿ ನಮ್ಮಲ್ಲಿ ಕಾಳಜಿ ಇರಬೇಕು, ಸಹಾನುಭೂತಿ ಇರಬೇಕು.

**ಆ) ಯೋಚಿಸಬಲ್ಲ ಮೆದುಳು:** ಕೇವಲ ಸಮಸ್ಯೆಯನ್ನು ಗುರುತಿಸುವುದು ಹಾಗೂ ಅನುಕಂಪ ತೋರುವುದು ಮಾತ್ರವಲ್ಲ. ಅದರ ಜೊತೆಗೆ ಸಮಸ್ಯೆಗೆ ನಾವು ಪರಿಹಾರ ಸೂಚಿಸುವಂತಾಗಬೇಕು. ಹಿರಿಯರ, ತಜ್ಞರ, ಸ್ವಾಧ್ಯಾಯದ ಹಾಗೂ ಸ್ವಾನುಭವದ ಮೂಲಕ ನಾವು ಪ್ರಾಯೋಗಿಕ ಹಾಗೂ ಕಾರ್ಯಗತಗೊಳಿಸಬಲ್ಲ ಪರಿಹಾರಗಳನ್ನು ಚಿಂತಿಸಬೇಕಾಗುತ್ತದೆ.

**ಇ) ಕ್ರಿಯಾಶೀಲ ಇಚ್ಛಾಶಕ್ತಿ:** ಭಾವಿಸಿಯಾಯಿತು, ಆಲೋಚಿಸಿಯಾಯಿತು. ಆದರೆ ಅದನ್ನು ಕಾರ್ಯಗತಗೊಳಿಸುವವರು ಯಾರು? ಅದು ನಾವೇ. ಯಾರೆಷ್ಟೇ ನಿಂದನೆ ಮಾಡಿದರೂ, ತೊಂದರೆ ತಂದೊಡ್ಡಿದರೂ, ಸಮಾಜವೇ ಎದುರು ನಿಂತರೂ, ಆತ್ಮೀಯ ಪರಿವಾರದವರೂ ನಮ್ಮಿಂದ ದೂರವಾದರೂ, ಅಳುಕದೆ, ಅಂಜದೆ, ಧೃತಿಗೆಡದೆ ಹಿಡಿದ ಯೋಜನೆಯನ್ನು ಕಾರ್ಯಗತಗೊಳಿಸುವ ಅದಮ್ಯ ಇಚ್ಛಾಶಕ್ತಿ ನಮಗಿರಬೇಕಾಗುತ್ತದೆ.

ಇಂತಹ ಸಮಾಜ ಸುಧಾರಕರ ಅಗತ್ಯ ಭಾರತಕ್ಕಿದೆ. ಪ್ರತಿಯೊಬ್ಬ ವ್ಯಕ್ತಿ ಹಾಗೂ ದೇಶವೂ ಈ ಕೆಳಕಂಡ ಅಂಶಗಳನ್ನು ಮೈಗೂಡಿಸಿಕೊಂಡಲ್ಲಿ ಅದು ಶ್ರೇಷ್ಠವಾಗುವುದು ಎನ್ನುತ್ತಾರೆ ಸ್ವಾಮೀಜಿ. ವೈಯಕ್ತಿಕವಾಗಿ ಈ ಅಂಶಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಲು ತರುಣ ಜನಾಂಗ ಪ್ರಯತ್ನಿಸಬೇಕು.

**ಅ) ಒಳಿತಿನಲ್ಲಿ ನಂಬಿಕೆ:** 'ಸತ್ಯಮೇವ ಜಯತೇ' ಎಂಬ ಮಾತಿನಂತೆ ಸತ್ಯ ಎಂದಿಗೂ ನಾಶವಾಗುವುದಿಲ್ಲ. ಸತ್ಕರ್ಮ ಹಾಗೂ ಸತ್ ಚಿಂತನೆಗಳು ನಮ್ಮನ್ನು ಮಹತ್ತರ ವಿಪತ್ತಿನಿಂದ ಪಾರು ಮಾಡುತ್ತವೆ. ಈ ಮಾತಿನಲ್ಲಿ ನಮಗೆ ವಿಶ್ವಾಸವಿರಬೇಕು.

**ಆ) ಅಸೂಯೆ ಇಲ್ಲದಿರುವುದು:** ಈ ಅಸೂಯೆಯೇ ನಮ್ಮ ದೇಶ ಗುಲಾಮರಾಷ್ಟ್ರವಾಗಲು ಕಾರಣವಾದದ್ದು. ಈ ಅಸೂಯೆಯನ್ನು ನಾವು ಕಿತ್ತೊಗೆಯಬೇಕು.

**ಇ) ಒಳ್ಳೆಯವರಾಗಲು ಹಾಗೂ ಒಳಿತನ್ನು ಮಾಡಲು ಪ್ರಯತ್ನಿಸುವ ಪ್ರತಿಯೊಬ್ಬರಿಗೂ ನೆರವು ನೀಡುವುದು:** ಕ್ರಿಯಾತ್ಮಕವಾಗಿ ನೆರವು ನೀಡುವುದು ಉತ್ತಮ. ಇಲ್ಲವಾದಲ್ಲಿ ಕನಿಷ್ಠಪಕ್ಷ ಒಳಿತನ್ನು ಶ್ಲಾಘಿಸುವ, ಪ್ರಶಂಸಿಸುವ ಮನೋಭಾವ ನಮ್ಮಲ್ಲಿರಬೇಕು.

## ೩) ತ್ಯಾಗ ಮತ್ತು ಸೇವೆ

ತ್ಯಾಗ ಮತ್ತು ಸೇವೆಯೇ ಭಾರತದ ಅವಳಿ ಆದರ್ಶ ಎಂಬುದು ಸ್ವಾಮೀಜಿಯ ಸ್ಪಷ್ಟ ಅಭಿಮತ. ''ಯಜ್ಞ, ಯಾಗ, ತಪಸ್ಸುಗಳು ಕಲಿಯುಗಕ್ಕಲ್ಲ. ಕಲಿಯುಗದಲ್ಲಿ ಮುಖ್ಯವಾಗಿ ಇರುವುದು ಒಂದೇ – ಅದೇ ದಾನ ಮಾಡುವುದು'' ಎನ್ನುತ್ತಾರೆ ವೇದವ್ಯಾಸರು. ಈ ದಾನಗಳಲ್ಲಿ ಅತಿ ಶ್ರೇಷ್ಠವಾದದ್ದು ಆಧ್ಯಾತ್ಮಿಕ ದಾನ, ನಂತರ ಬರುವುದು ವಿದ್ಯಾದಾನ. ಮೂರನೆಯದು ಆರೋಗ್ಯದಾನ ಹಾಗೂ ಕೊನೆಯದು ಅನ್ನದಾನ ಎನ್ನುತ್ತಾರೆ ಸ್ವಾಮೀಜಿ.

ಮೇಲೆ ತಿಳಿಸಿದ ದಾನಗಳಲ್ಲಿ ಯುವಕ-ಯುವತಿಯರು ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ತೊಡಗಿದರೆ ಅದು ರಾಷ್ಟ್ರಸೇವೆ ಮಾಡಿದಂತೆಯೇ. ಆದ್ದರಿಂದ ಈ ದಾನಗಳನ್ನು ಕುರಿತಾಗಿ ಅರಿಯಲು ಪ್ರಯತ್ನಿಸೋಣ.

### ಅ) ಅನ್ನದಾನ

''ವಿಧವೆಯರ ಕಣ್ಣೀರು ಒರೆಸದ ಹಾಗೂ ಹಸಿದವರಿಗೆ ಅನ್ನ ನೀಡದ ದೇವರಲ್ಲಾಗಲಿ, ಧರ್ಮದಲ್ಲಾಗಲಿ ನನಗೆ ನಂಬಿಕೆ ಇಲ್ಲ'' ಎನ್ನುತ್ತಾರೆ ಸ್ವಾಮೀಜಿ.

❖ ಹಸಿದವರಿಗೆ ಅನ್ನ ನೀಡುವುದು ಮಾತ್ರವಲ್ಲ, ಅದರ ಜೊತೆಗೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಸಿವನ್ನು ನೀಗಿಸಲು ಆಹಾರ ಉತ್ಪಾದನೆಯತ್ತ ಗಮನ ಹರಿಸುವಂತೆ ಮಾಡಬೇಕು.

❖ ಉದ್ಯೋಗ ಅರಸುವುದಕ್ಕಿಂತ ಉದ್ಯೋಗ ಸೃಷ್ಟಿಸುವತ್ತ (entrepreneurship) ಯುವಜನಾಂಗ ಗಮನ ಹರಿಸಬೇಕು. ಭಾರತದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀಯುತ ನರೇಂದ್ರ ಮೋದಿಯವರು ಹೇಳಿದಂತೆ ಆತ್ಮ ನಿರ್ಭರ ಭಾರತ ನಮ್ಮ ಕನಸಾಗಬೇಕು.

❖ ತಮ್ಮ ಸಂಪರ್ಕಕ್ಕೆ ಬಂದ ಯುವಕನೋರ್ವನಿಗೆ ಸ್ವಾಮೀಜಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿ ವ್ಯಾಪಾರ-ವ್ಯವಹಾರ ಮಾಡುವಂತೆ ಪ್ರೋತ್ಸಾಹಿಸುತ್ತಾರೆ. ಜೀವನದಲ್ಲಿ ರಿಸ್ಕ್ ತೆಗೆದು ಕೊಳ್ಳದೆ ಏನನ್ನೂ ಸಾಧಿಸಲಾಗುವುದಿಲ್ಲ. ಇದನ್ನು ಯುವ ಜನಾಂಗ ಅರಿಯಬೇಕು.

❖ ಭಾರತವು ಮುಖ್ಯವಾಗಿ ಹಳ್ಳಿಗಳ ದೇಶ. ಇಲ್ಲಿ ಕೃಷಿಯೇ ಮುಖ್ಯವಾದದ್ದು. ವಿದ್ಯಾವಂತರು ಹಳ್ಳಿಗಳಿಗೆ ತೆರಳಿ ಆಧುನಿಕ ವಿಜ್ಞಾನದ ಸಹಾಯದಿಂದ ಕೃಷಿಕಾರ್ಯದಲ್ಲಿ ತೊಡಗಬೇಕು ಎಂಬುದು ಸ್ವಾಮೀಜಿಯವರ ಆಶಯವಾಗಿತ್ತು. ಇದರಿಂದ ಉತ್ಪಾದನೆಯೂ ಹೆಚ್ಚಾಗುತ್ತದೆ ಹಾಗೂ ರೈತರು ತಮ್ಮ ಕರ್ತವ್ಯದ ಕಡೆಗೆ ಎಚ್ಚೆತ್ತುಕೊಳ್ಳುವಂತಾಗುತ್ತದೆ. ಅವರ ಬೌದ್ಧಿಕತೆಯೂ ಹೆಚ್ಚಾಗುತ್ತದೆ ಮತ್ತು ಇದರಿಂದಾಗಿ ಅವರು ಹೆಚ್ಚು ಹೆಚ್ಚು ಉಪಯುಕ್ತ ವಿಷಯಗಳನ್ನು ಕಲಿಯಲು ಸಾಧ್ಯವಾಗುತ್ತದೆ.

### ಆ) ಆರೋಗ್ಯದಾನ

ನಮಗಿಂದು ಬೇಕಾಗಿರುವುದು ಕಬ್ಬಿಣದ ಮಾಂಸಖಂಡಗಳು ಹಾಗೂ ಉಕ್ಕಿನಂತಹ ನರಮಂಡಲ ಎನ್ನುತ್ತಾರೆ ಸ್ವಾಮೀಜಿ.

ಆರೋಗ್ಯದಾನದಡಿಯಲ್ಲಿ ಈ ಕೆಳಕಂಡಂತೆ ನಾವು ಕಾರ್ಯವೆಸಗಬಹುದು.

❖ ಉಚಿತ ವೈದ್ಯಕೀಯ ಸೇವೆ ನೀಡುವುದು. ರಕ್ತದಾನದಂತಹ ಕಾರ್ಯಕ್ರಮಗಳನ್ನು ಯುವಕರು ಹಮ್ಮಿಕೊಳ್ಳಬಹುದು. ಯೋಗಾಸನ ತರಬೇತಿಗಳನ್ನು ಏರ್ಪಡಿಸಬಹುದು.

❖ ವಿದ್ಯಾವಂತರು ಗ್ರಾಮ ಹಾಗೂ ಪಟ್ಟಣಗಳಿಗೆ ತೆರಳಿ ಅಲ್ಲಿನ ಜನರಿಗೆ ಶುಚಿತ್ವದ ಕುರಿತಾಗಿ ಅರಿವು ಉಂಟುಮಾಡಬಹುದು.

❖ ಕೇವಲ ಪಠ್ಯಪುಸ್ತಕದ ಕಡೆಗಷ್ಟೇ ಗಮನ ಕೊಡದೆ ಕ್ರೀಡೆಯ ಕಡೆಗೂ ವಿದ್ಯಾರ್ಥಿಗಳು ಗಮನ ಹರಿಸುವಂತೆ ಮಾಡಬೇಕು. ಕ್ರೀಡೆಯನ್ನೇ ಮುಖ್ಯಕ್ಷೇತ್ರವಾಗಿ ಆಯ್ದುಕೊಳ್ಳುವ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಬೇಕು.

### ಇ) ವಿದ್ಯಾದಾನ

❖ ರಾಷ್ಟ್ರನಿರ್ಮಾಣದ ಮಹೋದ್ದೇಶವು ಈಡೇರಬೇಕಾದರೆ ಭಾರತದ ಚರಿತ್ರೆಯನ್ನು ಪುನರ್ನಿರೂಪಿಸಬೇಕಾದ ಆವಶ್ಯಕತೆಯನ್ನು ಸ್ವಾಮೀಜಿ ಒತ್ತಿ ಹೇಳುತ್ತಾರೆ:

''ಸಂಸ್ಕೃತ ಭಾಷೆಯನ್ನೂ ಪಾಶ್ಚಾತ್ಯರ ವೈಜ್ಞಾನಿಕ ವಿಧಾನವನ್ನೂ ಶ್ರಮವಹಿಸಿ ಅಧ್ಯಯನ ಮಾಡಿ. ಆಗ ಭಾರತದ ಇತಿಹಾಸವನ್ನು ವೈಜ್ಞಾನಿಕ ತಳಹದಿಯ ಮೇಲೆ ನಿಲ್ಲಿಸಲು ಸಾಧ್ಯವಾಗುವಂತಹ ಕಾಲವೊಂದು ಬರುತ್ತದೆ. ಈಗಿರುವ ಭಾರತದ ಇತಿಹಾಸವೆಲ್ಲ ಅವ್ಯವಸ್ಥಿತ. ಅದರ ಕಾಲಾನುಕ್ರಮಣಿಕೆಯೂ ನಿಖರವಾಗಿಲ್ಲ. ಪಾಶ್ಚಾತ್ಯರು ಬರೆದ ಈ ಚರಿತ್ರೆಯು ನಮ್ಮನ್ನು ದುರ್ಬಲಗೊಳಿಸುತ್ತದೆ ಅಷ್ಟೆ. ಏಕೆಂದರೆ ಅದು ಮೊದಲಿನಿಂದ ಕೊನೆಯವರೆಗೂ ನಮ್ಮ ಅವನತಿಯನ್ನಷ್ಟೇ ಹೇಳುತ್ತದೆ. ನಮ್ಮ ಧರ್ಮ, ಸಂಸ್ಕೃತಿ, ತತ್ತ್ವಗಳನ್ನು; ಆಚಾರ-ವಿಚಾರ ಸಂಪ್ರದಾಯಗಳನ್ನು ಅರ್ಥಮಾಡಿಕೊಳ್ಳಲಾರದ ಆ ವಿದೇಶಿಯರು, ಪೂರ್ವಗ್ರಹ ಪೀಡಿತವಲ್ಲದ ಪ್ರಾಮಾಣಿಕ-ನಿಷ್ಪಕ್ಷಪಾತ ಚರಿತ್ರೆಯನ್ನು ಬರೆಯಲು ಹೇಗೆ ಸಾಧ್ಯ? ಸ್ವಾಭಾವಿಕವಾಗಿಯೇ ಎಷ್ಟೋ ತಪ್ಪು ತಿಳುವಳಿಕೆಗಳು, ತಪ್ಪು ತೀರ್ಮಾನಗಳು ಅವುಗಳಲ್ಲಿ ನುಸುಳಿವೆ. ವೇದಗಳನ್ನು, ಪುರಾಣಗಳನ್ನು ಹಾಗೂ ಪ್ರಾಚೀನ ಐತಿಹಾಸಿಕ ದಾಖಲೆಗಳನ್ನು ಅಧ್ಯಯನ ಮಾಡಿ ಅದರ ಸಹಾಯದಿಂದ ನಿಷ್ಪಕ್ಷಪಾತವಾದ, ಸಹಾನುಭೂತಿಪೂರ್ವಕವಾದ ಹಾಗೂ ಸ್ಫೂರ್ತಿದಾಯಕವಾದ ನಮ್ಮ ನಾಡಿನ ಇತಿಹಾಸವನ್ನು ಬರೆಯಬೇಕು. ಇದನ್ನು ನಮ್ಮ ಜೀವನಾವಧಿಯ ಕಾರ್ಯವನ್ನಾಗಿ ಮಾಡಿಕೊಳ್ಳಬೇಕು; ನಮ್ಮ ಜೀವನಧ್ಯೇಯವನ್ನಾಗಿ ಮಾಡಿಕೊಳ್ಳಬೇಕು. ಭಾರತದ ಇತಿಹಾಸವನ್ನು ಬರೆಯಬೇಕಾದವರು ಭಾರತೀಯರು. ನಿಜವಾದ ರಾಷ್ಟ್ರೀಯ ಶಿಕ್ಷಣವೆಂದರೆ ಇದು. ಇಂತಹ

ರಾಷ್ಟ್ರೀಯ ಶಿಕ್ಷಣದ ಪ್ರಗತಿಯೊಂದಿಗೆ ನಿಜವಾದ ರಾಷ್ಟ್ರ ಪ್ರಜ್ಞೆಯೂ ಜಾಗೃತವಾಗುತ್ತದೆ.''

❖ ಸ್ವಾಮೀಜಿ ಯುವಕರಿಗೆ ಹೇಳಿದ ಬುದ್ಧಿಮಾತಿದು: ''ಸಂಸ್ಕೃತವನ್ನು ಕಲಿಯಿರಿ. ಆದರೆ ಅದರೊಂದಿಗೆ ಪಾಶ್ಚಾತ್ಯ ವಿಜ್ಞಾನವನ್ನೂ ಕಲಿಯಿರಿ. ಮತ್ತು ಕಲಿಯುವುದನ್ನು ನಿಖರವಾಗಿ ಕಲಿಯಿರಿ.'' ಪ್ರತಿಯೊಬ್ಬ ಯುವಕ-ಯುವತಿಯೂ ಜ್ಞಾನ ಸಂಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಕಲಿಕೆಯಲ್ಲಿ ನಿಖರತೆ ಇಂದಿನ ಉದ್ಯೋಗ ಕ್ಷೇತ್ರದಲ್ಲಿ ಅತಿಮುಖ್ಯ ಬೇಡಿಕೆ ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು.

❖ ಸಾಮಾಜಿಕ ಅವ್ಯವಸ್ಥೆಗಳ ಪರಿಹಾರಕ್ಕಾಗಿ ಹೊರಗಿನಿಂದ ನಿರ್ಬಂಧನೆ ಹೇರುವುದು ಪ್ರಯೋಜನವಾಗಲಾರದು. ಬದಲಾಗಿ ಸಮಾಜದ ಬಹುತೇಕ ಜನ ಸುಶಿಕ್ಷಿತರಾದಾಗ, ಜನರೇ ಈ ಅವ್ಯವಸ್ಥೆಗಳ ಕುರಿತಾಗಿ ಆಲೋಚಿಸಿ ತಮ್ಮ ಸಮಾಜವನ್ನು ರೂಪಿಸಿಕೊಳ್ಳುತ್ತಾರೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಗೂ ವಿದ್ಯೆ ದೊರಕುವಂತೆ ಮಾಡಲು ಪ್ರಯತ್ನಿಸಬೇಕು. ಯಾವ ವಿದ್ಯಾರ್ಥಿಗಳು ಆರ್ಥಿಕ ಕೊರತೆಯ ಕಾರಣದಿಂದಾಗಿ ಶಿಕ್ಷಣ ವ್ಯವಸ್ಥೆಯಿಂದ ದೂರವಾಗಿದ್ದಾರೋ, ಅವರಿಗೆ ಶಿಕ್ಷಣ ದೊರಕುವಂತೆ ಮಾಡಬೇಕು.

❖ ಸ್ವಾಮೀಜಿ ಹೇಳುತ್ತಾರೆ, ವಿದ್ಯಾವಂತ ಜನರು ಹಳ್ಳಿಗಳಿಗೆ ತೆರಳಬೇಕು. ಪ್ರತಿದಿನ ಸಂಜೆ ಹಳ್ಳಿಗರನ್ನು ತಮ್ಮ ಮನೆಗೆ ಕರೆದು ಕಥೆ-ದೃಷ್ಟಾಂತಗಳ ಮೂಲಕ ಅವರಿಗೆ ಬೋಧಿಸಬೇಕು. ಇದರಿಂದ ಎಂತಹ ರಾಷ್ಟ್ರಜಾಗೃತಿಯುಂಟಾಗುತ್ತದೆ ಎಂದರೆ, ಒಂದು ಸಾವಿರ ವರ್ಷಗಳಲ್ಲಿ ಎಷ್ಟು ಸಾಧಿಸಬಹುದೋ ಅದಕ್ಕಿಂತ ನೂರು ಪಟ್ಟು ಹೆಚ್ಚಿನದನ್ನು ಹತ್ತೇ ವರ್ಷಗಳಲ್ಲಿ ನಾವು ಸಾಧಿಸಬಹುದು ಎಂದು.

### ಈ) ಆಧ್ಯಾತ್ಮಿಕ ಜ್ಞಾನದ ದಾನ

❖ ಭಾರತದ ಅವನತಿಗೆ ಹಿಂದೂಧರ್ಮವೇ ಕಾರಣ ಎಂದು ಕೆಲವರು ಹೇಳುತ್ತಾರೆ. ಆದರೆ ಸ್ವಾಮೀಜಿ ಹೇಳುತ್ತಾರೆ ಹಿಂದೂ ಧರ್ಮವಲ್ಲ ಭಾರತದ ಅವನತಿಗೆ ಕಾರಣ. ಬದಲಾಗಿ ಹಿಂದೂ ಧರ್ಮದ ಅತ್ಯುನ್ನತ ಆಧ್ಯಾತ್ಮಿಕ ಜ್ಞಾನವನ್ನು ನಾವು ಅನುಷ್ಠಾನಕ್ಕೆ ತರಲಿಲ್ಲ ಹಾಗೂ ಜನಸಾಮಾನ್ಯರಿಗೆ ತಿಳಿಯಗೊಡಲಿಲ್ಲ ಎಂದು.

❖ ವೇದ-ಉಪನಿಷತ್ತು ಹಾಗೂ ಭಗವದ್ಗೀತೆಗಳಲ್ಲಿನ ಆಧ್ಯಾತ್ಮಿಕ ಮೂಲತತ್ತ್ವಗಳನ್ನು ಜಾತಿ-ಮತ-ಪಂಗಡಗಳ ಭೇದವಿಲ್ಲದೆ ಪ್ರತಿಯೊಬ್ಬರಿಗೂ ದೊರಕುವಂತೆ ಮಾಡಬೇಕು ಎಂಬುದು ಸ್ವಾಮೀಜಿಯವರ ಆಶಯವಾಗಿತ್ತು.

❖ ರಾಮಾಯಣ-ಮಹಾಭಾರತದಲ್ಲಿ ಜೀವನಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ಪ್ರಸ್ತುತ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವಾಗಿ ಒದಗಿಸುವ ಕಾರ್ಯ ಸಾಗಬೇಕಿದೆ.

❖ ಭಾರತದಲ್ಲಿ ಅಸಂಖ್ಯಾತ ಸಂಪ್ರದಾಯ-ರೀತಿ-ಆಚರಣೆಗಳು ಇವೆ. ಅವುಗಳನ್ನು ವಿರೋಧಿಸದೆ, ಟೀಕಿಸದೆ ಆತ್ಮತತ್ತ್ವದ ಮೂಲಭೂತ ಆಯಾಮಗಳಾದ ಶಕ್ತಿ, ನಿಸ್ವಾರ್ಥತೆ ಹಾಗೂ ಪವಿತ್ರತೆಗಳನ್ನು ಪ್ರತಿಯೊಬ್ಬರೂ ಪಾಲಿಸುವಂತೆ ಪ್ರೋತ್ಸಾಹಿಸಬೇಕು.

❖ ''ಭಾರತೀಯ ದೇವ-ದೇವಿಯರೆಲ್ಲ ನಮ್ಮ ದೇವರು. ಭಾರತದ ಆಚರಣೆ ನಮ್ಮ ಆಚರಣೆ'' - ಎಂಬ ಧ್ಯೇಯವಾಕ್ಯದಿಂದ ಯುವಜನಾಂಗ ಪ್ರೇರೇಪಿತವಾಗಬೇಕು. ನಮ್ಮ ಧರ್ಮ - ದೇವರು ಹಾಗೂ ದೇಶದ ಬಗ್ಗೆ ಪರಕೀಯರು ಹೀನವಾಗಿ, ತುಚ್ಛವಾಗಿ ಮಾತನಾಡಿದರೆ ನಾವು ಒಗ್ಗಟ್ಟಾಗಿ ವಿರೋಧಿಸಬೇಕಾಗುತ್ತದೆ.

### ಳ) ಸಂಘಟನಾ ಸಾಮರ್ಥ್ಯ

ಮೇಲೆ ತಿಳಿಸಿದ ಎಲ್ಲ ಕಾರ್ಯಯೋಜನೆಗಳನ್ನು ವೈಯಕ್ತಿಕವಾಗಿ ಸಾಧಿಸುವುದು ಕಷ್ಟಸಾಧ್ಯ. ಸಂಘಟನೆಯ ಮೂಲಕ ನಾವು ಇವುಗಳನ್ನು ಸಾಧಿಸಬಹುದು. ಈ ಸಂಘಟನಾ ಸಾಮರ್ಥ್ಯದ ಕೊರತೆ ನಮ್ಮಲ್ಲಿದೆ ಎಂದು ಸ್ವಾಮೀಜಿ ತೀಕ್ಷ್ಣವಾಗಿ ಟೀಕಿಸುತ್ತಾರೆ. ೩ ಜನ ಭಾರತೀಯರು, ೩ ನಿಮಿಷಗಳ ಕಾಲ ಒಗ್ಗಟ್ಟಿನಿಂದ ಇರಲಾರರು. ಇದಕ್ಕೆ ಮೂಲ ಕಾರಣ ಅಸೂಯೆ. ಪರಸ್ಪರ ವಿಶ್ವಾಸ ಹಾಗೂ ಪ್ರಶಂಸೆಯೇ ಸಂಘಟನೆಗೆ ಮೂಲ ಬುನಾದಿ. ಇದನ್ನು ತರುಣ ಜನಾಂಗ ಮನದಟ್ಟು ಮಾಡಿಕೊಳ್ಳಬೇಕು. ಈ ಸಂಗತಿಗಳ ಕುರಿತಾಗಿ ಸ್ವಾಮೀಜಿ ತಮ್ಮ ಭಾಷಣ ಹಾಗೂ ಪತ್ರಗಳಲ್ಲಿ ಅನೇಕ ಬಾರಿ ಪ್ರಸ್ತಾಪಿಸಿದ್ದಾರೆ.

❖ ಯಾರು ಆಳಾಗಬಲ್ಲನೋ, ಆತನೇ ಅರಸನಾಗಬಲ್ಲ. ಸೇವಾ ಮನೋಭಾವ ನಾಯಕನಿಗಿರಬೇಕಾದ ಮುಖ್ಯ ಲಕ್ಷಣ.

❖ ಇತರರ ಅಭಿಪ್ರಾಯಗಳನ್ನು ಸ್ವೀಕರಿಸುವ ಹಾಗೂ ತನ್ನ ಅಭಿಪ್ರಾಯಕ್ಕೆ ಇತರರು ಅನುಮೋದಿಸುವಂತೆ ಮಾಡುವ ಚಾಣಾಕ್ಷತೆ ಬೇಕಾಗುತ್ತದೆ.

❖ ಒಬ್ಬ ಸದಸ್ಯ ಇನ್ನೊಬ್ಬ ಸದಸ್ಯನ ಕುರಿತಾಗಿ ಹೇಳುವ ಚಾಡಿ ಮಾತನ್ನು ಕೇಳಬಾರದು. ಪಾರದರ್ಶಕ ವ್ಯವಹಾರ ಮುಖ್ಯವಾದದ್ದು.


❖ ವಿಧೇಯತೆ ಸಂಘಟನೆಯ ಮೂಲ. ವೈಯಕ್ತಿಕ ಸ್ವಾತಂತ್ರ್ಯವನ್ನು ಬಲಿಗೊಡದೆ ನಾಯಕನಿಗೆ, ಸಂಘಕ್ಕೆ ವಿಧೇಯನಾಗಿರುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು.

### ಉಪಸಂಹಾರ

ಸ್ವಾಮೀಜಿಯ ಚಿಂತನೆಗಳು ಅಗಾಧ ಹಾಗೂ ಅನಂತ. ಅದರ ಕೆಲವಾರು ಅಂಶಗಳನ್ನು ನಾವಿಲ್ಲಿ ಚಿತ್ರಿಸಿದ್ದೇವೆ. ಸ್ವಾಮೀಜಿಯವರ ಜೀವನ-ಸಂದೇಶಗಳನ್ನು ಅಧ್ಯಯನ ಮಾಡುವುದೇ ತರುಣ ಜನಾಂಗದ ಪ್ರಧಾನ ಕರ್ತವ್ಯವಾಗಿದೆ. ಆಗ ಮಾತ್ರವೇ ನಾವು ಪ್ರಸ್ತುತ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಬಹುದು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಯುವ ದಿನದ ಸಂಭ್ರಮಾಚರಣೆಯ ನಿಮಿತ್ತವಾಗಿ ನಾವುಗಳೆಲ್ಲ ಕಾರ್ಯಪ್ರವೃತ್ತರಾಗೋಣ. ✽

ಪುಸ್ತಕ ಪರಿಚಯ

# ‘೧೦೮ ವಿವೇಕದೀಪಿನೀ-ಕಥಾಮಾಲಾ’




**ಕೃತಿ:** ೧೦೮ ವಿವೇಕದೀಪಿನೀ-ಕಥಾಮಾಲಾ
**ಲೇಖಕ :** **ಡಾ. ವಾಗೀಶ್ವರೀ ಶಿವರಾಮ**
**ಪ್ರಕಾಶನ : ವಾಗೀಶ್ವರೀ ಪ್ರಕಾಶನ,**
**ಕಾವೂರು, ಮಂಗಳೂರು**
**ಬೆಲೆ: 180**
**ಪುಟ: 200**

**ಕ**ಥೆಗಳು ಎಲ್ಲ ಸಮಾಜದ, ಸಂಸ್ಕೃತಿಯ ಸಂಪತ್ತು. ಎಲ್ಲ ವಯಸ್ಸಿನವರಿಗೆ ಅವು ಪ್ರಿಯವಾದವು; ಆಗಾಗ ಅವುಗಳನ್ನು ನೆನೆಯುತ್ತ, ಮೆಲಕು ಹಾಕುತ್ತ, ಇತರರೊಂದಿಗೆ ಹಂಚಿ ಕೊಳ್ಳುತ್ತ ಆ ಕಥೆಗಳ ಭಾವವನ್ನು ಮನಸ್ಸಿನಗೆ ಅವಾಹಿಸಿಕೊಳ್ಳುವ ಪರಿಪಾಠ ಅತ್ಯಂತ ಚಿತ್ತಾಕರ್ಷಕ ಚಟುವಟಿಕೆ. ಕೇವಲ ಮನರಂಜನೆಯಷ್ಟೇ ಅಲ್ಲ; ಒಳ್ಳೆಯ ನೀತಿ, ಮೌಲ್ಯ, ಸಂಸ್ಕಾರ, ಜೀವನಪಾಠ, ನಡವಳಿಕೆಯ ಕ್ರಮ-ಇವುಗಳನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವ ಕೆಲಸವನ್ನು ಕಥೆಗಳು ಮಾಡುತ್ತವೆ. ಸಮಾಜದಲ್ಲಿ, ಪುರಾಣಗಳಲ್ಲಿ, ಪರಂಪರೆಯಲ್ಲಿ ಜನಜನಿತವಾದ ಇಂಥ ಉತ್ತಮ ಕಥೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ ಇತ್ತೀಚಿನ ವಿಧಾನ ಅನೇಕ ರೀತಿಯಲ್ಲಿ ಪ್ರಶಂಸಾರ್ಹ. ಏಕೆಂದರೆ, ಕಿವಿಯಿಂದ ಕಿವಿಗೆ, ಬಾಯಿಂದ ಬಾಯಿಗೆ ಹರಿದಾಡುವ ಕಥೆಗಳಿಗೆ ಇವು ಖಚಿತ ದಾಖಲೆಯ ರೂಪವನ್ನು ಒದಗಿಸುತ್ತವೆ.

ಈ ಹಿನ್ನೆಲೆಯೊಂದಿಗೆ, ಶ್ರೀಯುತ ಡಾ. ವಾಗೀಶ್ವರೀ ಶಿವರಾಮ ಅವರು ಪ್ರಕಟಿಸಿರುವ ಹಲವಾರು ಕಥಾಸಂಕಲನಗಳನ್ನು ನೆನೆಪಿಸಿಕೊಳ್ಳಬಹುದು. ಈ ಕೃತಿಗಳಿಗೆ ಇತ್ತೀಚಿನ ಸೇರ್ಪಡೆ, ‘**೧೦೮ ವಿವೇಕ ದೀಪಿನಿ-ಕಥಾಮಾಲಾ**’ ಗ್ರಂಥ. ಇದರ ಹೆಸರೇ ಸೂಚಿಸುವಂತೆ, ಇದರಲ್ಲಿ ೧೦೮ ಕಥೆಗಳಿವೆ; ಇದರೊಂದಿಗೆ ‘ವಿವೇಕದೀಪಿನಿ’ ಎಂಬ ಅರ್ಥಪೂರ್ಣವಾದ ಹೆಸರೂ ಇದೆ – ವಿವೇಕವನ್ನು ಜಾಗೃತಗೊಳಿಸುವ ಕಾರ್ಯವನ್ನು ಈ ಕಥೆಗಳು ಮಾಡುತ್ತವೆ. ಕಥೆಗಳು ಕೇವಲ ಮನರಂಜಕವಾಗಿದ್ದರೆ ಸಾಲದು; ಓದಿ ಮರೆತುಬಿಡುವ ಕಥೆಗಳ ಆದರೆ ಲಾಭವೇನು – ಅವು ನಮ್ಮ ಬುದ್ಧಿ, ವಿವೇಕವನ್ನು ಪ್ರಚೋದಿಸಿ, ನಮ್ಮ ಬದುಕಿಗೆ ದಾರೀದೀಪವಾಗಬೇಕು. ಒಂದಲ್ಲ ಒಂದು ರೀತಿ ಬದುಕನ್ನು ತಿದ್ದುವ ಕೆಲಸವನ್ನು ಮಾಡಬೇಕು. ಇದರಿಂದ ಓದಿದ ವ್ಯಕ್ತಿಗಳ ಜೀವನಕ್ಕೂ ಲಾಭ; ಬರೆದವನ ಯತ್ನವೂ ಸಾರ್ಥಕ; ಕೃತಿ ಕೂಡ ನಾಲ್ಕು ಕಾಲ ಬಾಳಿ ‘ಕೃತಿರತ್ನ’ ವೆನಿಸುವುದು. ಡಾ. ಶಿವರಾಮ ಅವರ ಕೃತಿ ಈ ಕಾರ್ಯವನ್ನು ಸಮರ್ಥವಾಗಿ ಮಾಡುತ್ತದೆ.

ಈ ಕೃತಿಯಲ್ಲಿ ನಾಲ್ಕು ಭಾಗಗಳಿವೆ: ೧) **ರಾಮಾಯಣ, ಮಹಾಭಾರತ, ಪುರಾಣ, ಐತಿಹಾಸಿಕ ಕಥೆಗಳು:** ರಾಮ, ಕೃಷ್ಣ, ಶಿವ ಮುಂತಾದ ದೇವತೆಗಳ ಕಥೆಗಳಲ್ಲದೆ, ತುಲಸೀದಾಸ, ತುಕಾರಾಮ, ಕಲಾವಿದ ರವಿವರ್ಮ, ನೆಪೋಲಿಯನ್ ಮುಂತಾದವರ ಕಥೆಗಳೂ ಇಲ್ಲಿವೆ – ಒಟ್ಟು ೨೩ ಕಥೆಗಳಿವೆ. ೨) **ಕೌಟುಂಬಿಕ ಪರಿಸರದ ವಿವೇಕದೀಪಿನಿ ಕಥೆಗಳು:** ಹೆಚ್ಚಾಗಿ ಕುಟುಂಬದ, ಸಂಸಾರದ ಕಥೆಗಳಿವೆ –ನೀತಿಯ, ತತ್ತ್ವದ ವಿಚಾರಗಳನ್ನು ಅವು ಹೇಳುತ್ತದೆ. ಒಟ್ಟು ೧೨ ಕಥೆಗಳು. ೩) **ಸಾಮಾಜಿಕ ಪರಿಸರದ ಕಥೆಗಳು:** ಬಹುಶಃ ಎಲ್ಲ ವರ್ಗಗಳಲ್ಲೂ ಸೇರ್ಪಡೆಯಾಗಬಲ್ಲ, ಎಲ್ಲ ಬಗೆಯ ಕಥೆಗಳು ಇಲ್ಲಿವೆ – ೪೬ ಕಥೆಗಳಿದ್ದು, ಗ್ರಂಥದ ದೊಡ್ಡ ವಿಭಾಗ ಇದಾಗಿದೆ. ವೈವಿಧ್ಯಮಯವಾದ ಈ ಕಥೆಗಳನ್ನು ಎಲ್ಲ ಬಗೆಯ ಓದುಗರೂ ಓದಿ ಆನಂದಿಸಬಹುದು. ೪) **ಆಧ್ಯಾತ್ಮಿಕ ತತ್ತ್ವದ ಕಥೆಗಳು:** ಹೆಸರೇ ಸೂಚಿಸುವಂತೆ, ಅಧ್ಯಾತ್ಮ ವಿಚಾರಗಳಿರುವ ೨೭ ಕಥೆಗಳು ಇಲ್ಲಿವೆ. ನಮ್ಮ ಪರಂಪರೆಯ ಕಥೆಗಳೊಂದಿಗೆ, ಮುಲ್ಲಾ ನಸ್ರುದ್ದೀನ್, ಥಾಯ್ಲೆಂಡಿನ ಬೌದ್ಧ ಕಥೆಗಳೂ ಇಲ್ಲಿ ಸೇರಿರುವುದು ವಿಶೇಷ.

ಇಲ್ಲಿನ ಕಥೆಗಳು ವಿವಿಧ ಮೂಲಗಳಿಂದ ಆರಿಸಿದವವದರೂ, ಅವುಗಳನ್ನು ಲೇಖಕರು ಹೇಳುವ ರೀತಿಯಲ್ಲಿ ಹೊಸತನವಿದೆ. ಎಲ್ಲ ಕಥೆಗಳ ಪ್ರಧಾನ ಶೀರ್ಷಿಕೆಯ ಜೊತೆಗೆ, ಇನ್ನೊಂದು ಉಪ-ಶೀರ್ಷಿಕೆಯನ್ನೂ ನಾವು ಕಾಣಬಹುದು. ಉದಾಃ ‘ಪ್ರೀತಿಗೆ ಎಲ್ಲರೂ ವಶವಾಗುತ್ತಾರೆ’ ಎಂಬುದು ಪ್ರಧಾನ ಶೀರ್ಷಿಕೆ; ‘ದುಷ್ಟ ಹಸುವನ್ನು ಪ್ರೀತಿಯಿಂದಲೇ ಪಳಗಿಸಿದ ಬಾಲಕ’ – ಇದು ಉಪಶೀರ್ಷಿಕೆ. ಇಲ್ಲಿ ಕಥೆಯ ಸಾರ, ಭಾವಾರ್ಥ ಅಥವಾ ಒಳ ಅರ್ಥವನ್ನು ಪ್ರಧಾನ ಶೀರ್ಷಿಕೆ ಹೇಳುತ್ತದೆ; ಕಥೆಯ ಚೌಕಟ್ಟನ್ನು ಉಪಶೀರ್ಷಿಕೆ ಹೇಳುತ್ತದೆ. ಹೀಗೆ ಎರಡೆರಡು ಶೀರ್ಷಿಕೆ ನೀಡಿರುವುದಾದರೂ ಏಕೆ? ಇದರಿಂದ ಶೀರ್ಷಿಕೆಯ ಉದ್ದೇಶವೇ ಆದ, ಕಥೆಯ ಸಾರವನ್ನು ಹೇಳುವುದು ಸಫಲವಾಗದೆ ಹೋಗಲಿಲ್ಲವೆ? – ಈ ರೀತಿಯ ಪ್ರಶ್ನೆ ಮೂಡಲೂಬಹುದು. ಆದರೆ ಅದರಿಂದ ಓದುಗರ ಕುತೂಹಲ ಹೆಚ್ಚುವುದು.

ಹೀಗೆ ಹತ್ತು ಹಲವು ಮೂಲಗಳಿಂದ ಆರಿಸಿದ ವೈವಿಧ್ಯಮಯ ಕಥೆಗಳ ವಿಶಿಷ್ಟ ಸಂಕಲನವಿದು. ವಿಶೇಷವಾಗಿ, ನೈತಿಕಕಥೆಗಳನ್ನು ಆರಿಸಿ ಶಿಕ್ಷಣ, ತರಬೇತಿ ಶಿಬಿರಗಳಲ್ಲಿ ಬಳಸುವವರಿಗೆ ಇದು ಅತ್ಯಂತ ಉಪಯುಕ್ತ, ಸಂಗ್ರಹಯೋಗ್ಯ ಗ್ರಂಥ ಇದಾಗಿದೆ. ✽